ಆಕಾಶದೆತ್ತರಕ್ಕೆ ಔಷಧ, ಪಾತಾಳದಲ್ಲಿ ಬಡರೋಗಿ!

ಔಷಧಗಳ ಬೆಲೆ ಕುರಿತು ಒಂದು ವಿಮರ್ಶೆ



ರೋಗ....ಔಷಧ....ಸಾಲ

ಮಾರ್ಚ್ 2009

ಆಲ್ ಇಂಡಿಯಾ ಡ್ರಗ್ ಆ್ಯಕ್ಷನ್ ನೆಟ್‌ವರ್ಕ್ (ಏಡನ್)

ತರ್ಕಬದ್ಧ ಔಷಧ ನೀತಿ ಮತ್ತು ಚಿಕಿತ್ಸೆಗಾಗಿ ರಾಷ್ಟ್ರೀಯ ಆಂದೋಲನ

ಆಕಾಶದೆತ್ತರಕ್ಕೆ ಔಷಧ, ಪಾತಾಳದಲ್ಲಿ ಬಡರೋಗಿ!

ಔಷಧಗಳ ಬೆಲೆ ಕುರಿತು ಒಂದು ವಿಮರ್ಶೆ



ರೋಗ....ಔಷಧ....ಸಾಲ....ಸಾವು!!!!

ಮಾರ್ಚ್ 2009

ಆಲ್ ಇಂಡಿಯಾ ಡ್ರಗ್ ಆ್ಯಕ್ಷನ್ ನೆಟ್‌ವರ್ಕ್ (ಏಡನ್)

ತರ್ಕಬದ್ಧ ಔಷಧ ನೀತಿ ಮತ್ತು ಚಿಕಿತ್ಸೆಗಾಗಿ ರಾಷ್ಟ್ರೀಯ ಆಂದೋಲನ

ಆಕಾಶದೆತ್ತರಕ್ಕೆ ಔಷಧ, ಪಾತಾಳದಲ್ಲಿ ಬಡರೋಗಿ!

ಔಷಧಗಳ ಬೆಲೆ ಕುರಿತು ಒಂದು ವಿಮರ್ಶೆ

This policy brief is published by:
All-India Drug Action Network (AIDAN)
A Campaign Group for Rational Drug Therapy and Policy
(http://aidanindia.wordpress.com/)

Co-conveners:
Dr. Gopal Dabade (drdabade@gmail.com), and
Dr. Mira Shiva (mirashiva@gmail.com),
Joint conveners:
Mr. S. Srinivasan (sahajbrc@youtele.com), and
Dr. Anurag Bhargava (anuragb17@gmail.com)

Contact address:
57, Tejaswinagar, Dharwad 580 002,
Tel & fax: 0836 2461722; Cell: (91) 9448862270

Suggested contribution: Rupees 20.

Credits: S. Srinivasan and Anurag Bhargava authored the initial draft of this policy brief.

ಕನ್ನಡಕ್ಕೆ : ಶಾರದಾ ಗೋಪಾಲ

ಔಷಧದ ಬೆಲೆ ಮತ್ತು ಜನರ ಖರೀದಿ ಸಾಮರ್ಥ್ಯ

ಭಾರತದ ಔಷಧ ಕೈಗಾರಿಕೆಯು ಜಗತ್ತಿನಲ್ಲಿಯೇ ಹೆಸರು ಮಾಡಿರುವಂಥಾದ್ದು. ಮೂಲ ಔಷಧಗಳನ್ನು ಕಡಿಮೆ ಬೆಲೆಯಲ್ಲಿ ಉತ್ಪಾದಿಸಲು ಪ್ರಸಿದ್ಧವಾದ ಕೈಗಾರಿಕೆ ಇದು. ಈ ಬಗ್ಗೆ ನಮಗೆಲ್ಲಾ ಹೆಮ್ಮೆಯಿದೆ. ಆದರೇನು? ಹೊರದೇಶಗಳಲ್ಲಿ ಒಳ್ಳೆಯ ಹೆಸರು ಮಾಡಿರುವ ಕೈಗಾರಿಕೆಯು ಭಾರತದೊಳಗಡೆ ಔಷಧಗಳ ಬೆಲೆಯನ್ನು ಮಾತ್ರ ಆಕಾಶದೆತ್ತರಕ್ಕಿಟ್ಟಿದೆ. ಆ ಮೂಲಕ ಮಾನವ ಹಕ್ಕುಗಳ ದಮನ ಮಾಡುತ್ತಿದೆ. ರೋಗಿಗಳು ನಿದ್ರಾರಹಿತ ರಾತ್ರಿಗಳನ್ನು ಕಳೆಯುವಂತೆ, ಆ ಮೂಲಕ ಇನ್ನಷ್ಟು ಕಷ್ಟಕ್ಕೆ ಸಿಲುಕುವಂತೆ ಮಾಡುತ್ತಿದೆ.

ಔಷಧಗಳ ಮೇಲೆ ಕಂಪನಿಗಳಿಗೆ ನೂರಕ್ಕೆ 1000-4000 ದಷ್ಟು ಲಾಭ. ಔಷಧಗಳ ಬೆಲೆ ಕಡಿಮೆ ಮಾಡಲು ಅಥವಾ ಆರೋಗ್ಯ ವ್ಯವಸ್ಥೆಯ ಖರ್ಚು ಕಡಿಮೆ ಮಾಡಲು ಯಾರೊಬ್ಬರೂ ಪ್ರಯತ್ನಿಸುತ್ತಿಲ್ಲ. ಜನರ ಅವಶ್ಯಕತೆಗೆ ತಕ್ಕಂತೆ ಔಷಧಗಳು ಇಲ್ಲ. ಬದಲಿಗೆ ಬೇಡಿಕೆಯನ್ನು, ಅವಶ್ಯಕತೆಯನ್ನು ಮಾರುಕಟ್ಟೆಯು ಸೃಷ್ಟಿಸುತ್ತಿದೆ.

ಭಾರತದಲ್ಲಿ ಔಷಧಗಳ ಬೆಲೆ ಕಡಿಮೆ ಎಂಬ ನಂಬಿಕೆ ಹೊರಗಿನವರಿಗಿದೆ. ಎಷ್ಟು ಕಡಿಮೆ ಬೆಲೆ ಇದೆ? ಈ ಅಂಶಗಳನ್ನು ಗಮನಿಸಿ:

- ಕ್ಷಯ ಬಂದಾಗ ಬೇರೆ ಬೇರೆ ಔಷಧಗಳನ್ನು ಸೇವಿಸಬೇಕಷ್ಟೇ? ಅದರ ಒಟ್ಟೂ ಬೆಲೆಯು ದಿನಕ್ಕೆ 60/-ರೂ. ಗಳಿಸುವವನು 737 ದಿನ ಮಾಡಿದ ಕೂಲಿಗೆ ಸಮನಾಗಿರುತ್ತದೆ.
- ಹೃದಯದ ರಕ್ತನಾಳ ಸಂಬಂಧಿ ರೋಗದ ಔಷಧದ ಬೆಲೆ 209 ದಿನಗಳ ಕೂಲಿಗೆ ಸಮ.
- ಹೆಪ್ಯಾಟಿಟಿಸ್ ಬಿ ಪ್ರತಿಬಂಧಕ ಔಷಧದ ಬೆಲೆ 30 ದಿನಗಳ ಕೂಲಿಗೆ ಸಮ.
- ಕಬ್ಬಿಣಾಂಶ ಕೊರತೆಯ ರಕ್ತಹೀನತೆಯ ಔಷಧದ ಬೆಲೆ 6 ತಿಂಗಳ ಕೂಲಿಗೆ ಸಮ.
- ರಕ್ತನಾಳದ ರೋಗಕ್ಕೆ ಬೇಕಾದ ಔಷಧ ಖರೀದಿಸಬೇಕೆಂದರೆ ಒಂದು ವರ್ಷದ ಕೂಲಿಯನ್ನು ಪೂರ್ತಿ ಕೊಟ್ಟುಬಿಡಬೇಕು.
- ಪ್ಯಾರಾಸಿಟಮಾಲ್‌ನ 10 ಗುಳಿಗೆ ಖರೀದಿಸಲು ಅಮೆರಿಕಾ ಅಥವಾ ಇಂಗ್ಲೆಂಡಿನ ಮನುಷ್ಯ 10 ನಿಮಿಷ ಕೆಲಸ ಮಾಡಿದರೆ ಸಾಕು. ನಮ್ಮ ದೇಶದ ಪ್ಯಾರಾಸಿಟಮಾಲ್ ಗುಳಿಗೆಯು ಜಗತ್ತಿನಲ್ಲಿಯೇ ಅತಿ ಕಡಿಮೆ ಬೆಲೆಯದ್ದಾದರೂ ಅದನ್ನು ಖರೀದಿಸಲು ನಮ್ಮ ದೇಶದ ಮನುಷ್ಯ ಕನಿಷ್ಟ ಒಂದು ತಾಸಾದರೂ ಕೆಲಸ ಮಾಡಬೇಕು.

ನನ್ನ ಒಂದು ಮೂತ್ರ ಕೋಶ ರಿಪೇರಿ ಖರ್ಚಿಗೆ ಇನ್ನೊಂದನ್ನು
ಮಾರಿ ಹಣ ತರಬೇಕಂತೆ, ಡಾಕ್ಟರರು ಹೇಳಿದ್ದಾರೆ.

ಒಂದು ಕಪ್ ಚಹಾಕ್ಕಿಂತ ಕಡಿಮೆ ಬೆಲೆ?

ಎಷ್ಟೋ ಔಷಧಗಳು ಒಂದು ಕಪ್ ಚಹಾಕ್ಕಿಂತ ಕಡಿಮೆ ಬೆಲೆಯದು, ಅವುಗಳ ಮೇಲೆ ನಿಯಂತ್ರಣದ ಅವಶ್ಯಕತೆ ಏನಿದೆ? ಎಂಬ ವಾದವಿದೆ. ಆದರೆ ಅದೇ ಔಷಧವನ್ನು ದಿನಕ್ಕೆ ಅನೇಕ ಬಾರಿ ತೆಗೆದುಕೊಳ್ಳಬೇಕಾಗಬಹುದು. ಯಾವ ಡಾಕ್ಟರೂ ಒಂದು ಬಾರಿ ಒಂದೇ ಔಷಧ ಬರೆಯುವುದಿಲ್ಲ. ಕೆಲವು ಔಷಧಗಳನ್ನಂತೂ ತಿಂಗಳು-ವರ್ಷಗಟ್ಟಲೆ ತೆಗೆದುಕೊಳ್ಳಬೇಕಾಗುತ್ತದೆ. ಶಹರಗಳಲ್ಲಿ ಚಹಾದ ಬೆಲೆ 2 ರೂ. ಗಿಂತ ಜಾಸ್ತಿಯೇ. ಹೀಗಿರುವಾಗ ಒಂದು ಹೊತ್ತಿನ ಊಟಕ್ಕೂ ತೊಂದರೆ ಇರುವಂಥವರಿಗೆ ಔಷಧಗಳ ಬೆಲೆ ಎಷ್ಟು ಕಡಿಮೆ ಇದ್ದರೂ ಕಡಿಮೆಯಲ್ಲ.

ಬಯೋಟೆಕ್ನಾಲಜಿಯ ಔಷಧಗಳ ಬೆಲೆ

ಜೈವಿಕ ತಂತ್ರಜ್ಞಾನದ ಬಳಕೆಯಿಂದ ಔಷಧಗಳನ್ನು ತಯಾರಿಸಿದಾಗ ಬೆಲೆ ಬಹಳ ಕಡಿಮೆ ಆಗುವುದೆಂದು ಹೇಳಿದ್ದರು. ಆದರೆ ಈಗ ಆಗಿರುವುದೇನು? ನೀವೇ ನೋಡಿ:

- Eli Lily (ಇಲಿಲಿಲಿ ಕಂಪನಿಯ) ಹೃದಯದ ಕಾಯಿಲೆಗೆ ತೆಗೆದುಕೊಳ್ಳುವ ಎಂಟಿ ಎಂಜೈನಲ್ (Antianginal) ಔಷಧ, Abciximab. ಒಬ್ಬ ಮನುಷ್ಯನಿಗೆ ಒಂದು ದಿನಕ್ಕೆ ಬೇಕಾಗುವ ಔಷಧದ ಬೆಲೆ, 39,480/-ರೂ.

- ಮೂತ್ರನಾಳದ ತೊಂದರೆಯಿಂದ ಆಗುವ ರಕ್ತಹೀನತೆಗೆ
- Epoeitin alfa, Wockhardt, ಕಂಪನಿಯಿಂದ, ಒಬ್ಬ ಮನುಷ್ಯನ 8 ವಾರಗಳ ಔಷಧದ ಬೆಲೆ 10,200 /-ರೂ. ಮತ್ತು, ಆ ನಂತರದಲ್ಲಿ ವಾರಕ್ಕೆ 1,912/-ರೂ. ನಿಂದ 11,475/-ರೂ.ನಂತೆ ಎಂಟು ವಾರದವರೆಗೆ.
- ರಕ್ತ ಕ್ಯಾನ್ಸರಿಗೆ Roferan (Nicholas Piramal) ನಿಕೋಲಾಸ್ ಪಿರಾಮಲನ ರೋಫೆರಾನ್ ದ ಬೆಲೆ, ಪ್ರಾರಂಭಕ್ಕೆ 43,552 ರೂ. ಮುಂದೆ ಮುಂದುವರಿಕಾ ಚಿಕಿತ್ಸೆಗೆ ರೂ. 1,06,158 – 3,18,474/-ರೂ. 6-18 ತಿಂಗಳ ಕಾಲ.
- ಸಂದು ನೋವು ಬಹಳ ತೀವ್ರವಾಗಿದ್ದಾಗ ಬಹಳ ಕಾಲ ತೆಗೆದುಕೊಳ್ಳಬೇಕಾದ
- Etanercept, Wyeth, ಕಂಪನಿಯ ಗುಳಿಗೆಯ ಒಂದು ವಾರದ ಚಿಕಿತ್ಸೆಗೆ 18,131ರೂ.

ಕ್ಯಾನ್ಸರಿನ ಗ್ಲೀವೆಕ್ (Glivec) ಔಷಧಿಯ ಬೆಲೆ ತಿಂಗಳಿಗೆ,

- ನೋವಾರ್ಟಿಸ್ (ಸ್ವಿಸ್ ಕಂಪನಿಯದ್ದು) 1,30,000 ರೂ.
- ಭಾರತೀಯ ಕಂಪನಿಗಳದ್ದು 10,000 ರೂ.

ಇದೂ ಕೂಡ ಕೈಗೆಟುಕುವಂಥದ್ದಲ್ಲ.

ಸಮೃದ್ಧಿಯ ಮಧ್ಯೆ ಬಡವರ ಸಮಸ್ಯೆ

- ಭಾರತದಲ್ಲಿ ಔಷಧಗಳ ಬೆಲೆ ಬಹಳ. ಜನರಿಗೆ ಕೈಗೆಟುಕುವುದಿಲ್ಲ.
- ಚಿಕಿತ್ಸಾ ವೆಚ್ಚದ 50-80% ನಷ್ಟು ಭಾಗ ಔಷಧಕ್ಕೇ ಹೋಗುತ್ತದೆ.
- ಹಳ್ಳಿಗಳಲ್ಲಿ ವರದಕ್ಷಿಣೆಯ ನಂತರ ಅತಿ ಹೆಚ್ಚು ಸಾಲಕ್ಕೆ ಕಾರಣವಾಗುವುದು ಔಷಧ ಮತ್ತು ಆರೋಗ್ಯ ಚಿಕಿತ್ಸೆಯೇ..
- ಭಾರತದಲ್ಲಿ ಬಹಳ ಜನರಿಗೆ 'ಆರೋಗ್ಯ ವಿಮೆ' ಎಂಬುದಿಲ್ಲ. ಇದ್ದಾಗಲೂ ಕೂಡ ಔಷಧಗಳ ಬೆಲೆಯು ನಿಯಂತ್ರಣದಲ್ಲಿದ್ದರೆ ಸಾಕಷ್ಟು ಉಳಿತಾಯ ಆಗುತ್ತದೆ.
- ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ಕುಸಿಯುತ್ತಿದೆ. ರೋಗಿಗಳಿಗೆ ಖಾಸಗಿ ದವಾಖಾನೆಯತ್ತ ಹೋಗದೆ ಬೇರೆ ದಾರಿಯಿಲ್ಲ. ಆ ದಿನಗಳ ಕೂಲಿ ಹೋಗುವುದರ ಜೊತೆಗೆ ಖಾಸಗಿಯಲ್ಲಿ ಬಹಳಷ್ಟು ಖರ್ಚು ಮಾಡದೇ ವಿಧಿ ಇಲ್ಲವಾಗುತ್ತದೆ.



ಅಧಿಕ ಬೆಲೆ ಎಂದರೆ ಅದೆಷ್ಟು ಅಧಿಕ? ಬರೋಡಾದಲ್ಲಿ ಲೋಕಾಸ್ಟ್ ಎಂಬ ಚಿಕ್ಕ ಉದ್ದಿಮೆಯೊಂದಿದೆ. ಈ ಕಂಪನಿಯ ಔಷಧಗಳೊಂದಿಗೆ ಹೋಲಿಸಿ ನೋಡಿ.

Sl. No.	ಹೆಸರು Name of Drug	ಉಪಯೋಗ Use	ಒಂದು ಗುಳಿಗೆಗೆ ಲೋಕಾಸ್ಟ್ ಕಂಪನಿಯ ಬೆಲೆ	ಒಂದು ಗುಳಿಗೆಗೆ ಪೇಟೆಯ ಬೆಲೆ
1	ಅಲ್ಬೆಂಡಾಜೋಲ್ Albendazole 400mg	ಜಂತುವಿಗೆ	ರೂ.1.10/-	ರೂ. 9 /- -12/-
2	ಅಮ್ಲೋಡಿಪೀನ್ Amlodipine 5mg	ರಕ್ತದೊತ್ತಡಕ್ಕೆ ಒತ್ತಡ ಕಡಿಮೆ ಮಾಡಲು	25 ಪೈಸೆ	ರೂ.1.40/- - 5.00/-
3	ಅಟೆನಾಲ್ಲ Atenolol 50 mg	ರಕ್ತದೊತ್ತಡಕ್ಕೆ (ಒತ್ತಡ ಕಡಿಮೆ ಮಾಡಲು)	ರೂ. 3. 30/-	ರೂ. 4/- – 22/-
4	ಎನಾಲಪ್ರಿಲ್ Enalapril 5 mg	ರಕ್ತದ ಒತ್ತಡಕ್ಕೆ	30 ಪೈಸೆ	ರೂ. 1.60/- - 2.30/-
5	ಫ್ಲುಕೊನಾಝೋಲ್ Fluconazole 150 mg	ಏಡ್ಸ್ ರೋಗಿಗೆ (ಅಥವಾ ಬೇರೆಯವರಿಗೆ) ಬುರುಸು ಸೋಂಕು ತಟ್ಟಿದಾಗ	ರೂ.3.50/-	ರೂ. 26/- - 32 /-
6	ಸಿಟ್ರಿಝೀನ್ Cetrizine	ಅಲರ್ಜಿಗೆ	20 ಪೈಸೆ	ರೂ. 0.50/- - 3.00/-

ಭಾರತದಲ್ಲಿ ಔಷಧ ಮಾರುಕಟ್ಟೆ : ಮಾರುಕಟ್ಟೆ ಉದ್ದಿಮೆಯ ವೈಫಲ್ಯ.

ಮಾರುಕಟ್ಟೆಯಲ್ಲಿ ಸ್ಪರ್ಧೆಯಿದ್ದಾಗ ಜನರು ಅತಿ ಕಡಿಮೆ ಬೆಲೆಯ ವಸ್ತುವನ್ನು ಖರೀದಿಸುತ್ತಾರೆ. ಜನರು ತಮ್ಮ ಬ್ರಾಂಡನ್ನೇ ಖರೀದಿಸಲಿ ಎಂದು ಕಂಪನಿಗಳು ವಸ್ತುಗಳ ಬೆಲೆಯನ್ನು ಕಡಿಮೆ ಮಾಡುತ್ತವೆ. ಮಾರುವವರಿಗೂ ಖರೀದಿಸುವವರಿಗೂ ಈ ಬಗ್ಗೆ ಗೊತ್ತಿರುತ್ತದೆ.

ನಮಗೆ ಭಾರತವು ಒಂದು ಒಳ್ಳೆಯ ಮಾರುಕಟ್ಟೆ
ಇಲ್ಲಿ ನಮ್ಮ ಔಷಧಕ್ಕೆ ಯಾವ ಬೆಲೆ ಬೇಕಾದರೂ ಇಡಬಹುದು. ಔಷಧಗಳ ಬೆಲೆ ನಿಯಂತ್ರಣದ ಜವಾಬ್ದಾರಿಯಿಂದ ಸರಕಾರವೂ ಕೂಡ ಹಿಂದೆ ಸರಿಯುತ್ತಿದೆ. ಈಗ ನಮ್ಮನ್ನು ತಡೆಯುವವರು ಯಾರಿದ್ದಾರೆ?



ಆದರೆ ಭಾರತದಲ್ಲಿ ಔಷಧ ಮಾರುಕಟ್ಟೆಯ ವಿಷಯ ಹಾಗಿಲ್ಲ.

- ಒಂದು ಕಡೆ ಮುಕ್ತ ಮಾರುಕಟ್ಟೆ ಎನ್ನುತ್ತಾರೆ. ಆದರೆ ಇಲ್ಲಿ ಸ್ಪರ್ಧೆಯೆಂಬುದು ಕೆಲಸ ಮಾಡುವುದಿಲ್ಲ. ಇನ್ನೊಂದು ಕಡೆ ಆರೋಗ್ಯ ಸೇವೆ ಎಂದು ಕರೆಯುತ್ತಾರೆ. ಅದಕ್ಕೆ ಮಾರುಕಟ್ಟೆಯ ಆರ್ಥಿಕತೆ ಅಡ್ಡಿ ಬರುತ್ತದೆ.
- ಭಾರತದ ಔಷಧದ ಮಾರುಕಟ್ಟೆಗೆ 'ಮುಕ್ತ' ಎನ್ನುವುದಕ್ಕಿಂತ 'ಸ್ವೇಚ್ಛೆ' ಎಂಬ ಶಬ್ದ ಹೆಚ್ಚು ಹೊಂದುತ್ತದೆ. ಇಲ್ಲಿ ಔಷಧದ ಹೆಸರಿನಲ್ಲಿ ಬಾಣಂತಿಯರ ಗರ್ಭದಿಂದ ಬಿದ್ದ ಮಾಸು ಬಳಸಿ, ಪ್ರಾಣಿಗಳ ಪಿತ್ಥಕೋಶ ತೆಗೆದು, ದನಕರುಗಳ ರಕ್ತ ಕೂಡಿಸಿ ಬೇಕಾದ ಅವೈಜ್ಞಾನಿಕ ಔಷಧ ತಯಾರಿಸಬಹುದು. ಬೇಕಾದ ಬೆಲೆಯಲ್ಲಿ ಅವನ್ನು ಮಾರಬಹುದು. ಅದಕ್ಕೆ ಯಾವುದೇ ರೀತಿಯ ಮೌಲ್ಯ ಅಡ್ಡಿ ಬರುವುದಿಲ್ಲ.

- ನಮ್ಮ ದೇಶದ ಅತಿ ಹೆಚ್ಚು ಮಾರಾಟವಾಗುವ 300 ಔಷಧಗಳನ್ನು ಪಟ್ಟಿ ಮಾಡಲಾಗಿದೆ (ಓ.ಆರ್.ಜಿ ಸ್ಪೈಲ್ಸ್). 35,000 ಕೋಟಿ ರೂಪಾಯಿಗಳ ವ್ಯವಹಾರ ಇದು. ಆದರೆ ಈ ಪಟ್ಟಿಯಲ್ಲಿ ಇರುವ ಔಷಧಗಳಲ್ಲಿ 60% ನಷ್ಟು ರಾಷ್ಟ್ರೀಯ ಅವಶ್ಯಕ ಔಷಧಗಳ ಪಟ್ಟಿಯಲ್ಲಿರುವಂಥವು ಅಲ್ಲವೇ ಅಲ್ಲ. ಅಂದರೆ ದೇಶದಲ್ಲಿ ಅತಿ ಹೆಚ್ಚು ಮಾರಾಟವಾಗುವ ಔಷಧಗಳಲ್ಲಿ ಅರ್ಧಕ್ಕಿಂತ ಹೆಚ್ಚು ಅವಶ್ಯಕ ಔಷಧಗಳಲ್ಲ.

ಮುಕ್ತ ಮಾರುಕಟ್ಟೆಯಲ್ಲಿ ಔಷಧಗಳು : ಬೆಲೆ ನಿಯಂತ್ರಣ ಇಲ್ಲದಿದ್ದರೆ ಏನಾಗುತ್ತದೆನ್ನುವುದಕ್ಕೆ ಕೆಲವು ಉದಾಹರಣೆಗಳು

ಬ್ಯಾಕ್ಟೀರಿಯಾ ಸೋಂಕಿಗೆ

ನಂ.	ಔಷಧದ ಹೆಸರು	ಬೆಲೆ ನಿಯಂತ್ರಣ ಇರುವ ಔಷಧ	ಅತಿ ಕಡಿಮೆ ಬೆಲೆಯದ್ದು/ಹೆಸರು /ಕಂಪನಿಯ ಹೆಸರು	ಅತಿ ಹೆಚ್ಚು ಬೆಲೆಯದ್ದು/ ಬ್ರಾಂಡ್‌ಹೆಸರು/ ಕಂಪನಿಯಹೆಸರು	ಎರಡರ ನಡುವಿನ ವ್ಯತ್ಯಾಸ
1	ಒಫ್ಲೊಕ್ಸಾಸಿನ್ Ofloxacin 200 mg	ಇಲ್ಲ	ರೂ. 3.20/ Zo/ FDC	ರೂ. 31.00/ Tarivid / Aventis	969%
2	ಲೆವೊಫ್ಲೊಕ್ಸಾಸಿಂ Levofloxacin 500 mg	ಇಲ್ಲ	ರೂ. 6.82/ Levoflox / Cipla	ರೂ. 95.0/ Tavanic / Aventis	1392%
3	ಸಿಪ್ರೊಫ್ಲೋಕ್ಸಾಸಿನ್ Ciprofloxacin 500 mg	ಇದೆ	ರೂ. 3.90/ Zoxan / FDC	ರೂ. 8.90/ Cifran / Ranbaxy	228%
4	ಅಝಿಥ್ರೋಮೈಸಿನ್ 250 mg Azithromycin	ಇದೆ	ರೂ. 8.50/ Zathrin / FDC	ರೂ. 39.14/ Vicon / Pfizer	460%

ಎಚ್.ಐ.ವಿ/ಏಡ್ಸ್ (ಮತ್ತು ಇನ್ನಿತರ ವೈರಸ್) ಸೋಂಕಿಗೆ

ನಂ.	ಔಷಧದ ಹೆಸರು	ಬೆಲೆ ನಿಯಂತ್ರಣ ಇರುವ ಔಷಧ	ಅತಿ ಕಡಿಮೆ ಬೆಲೆಯದ್ದು/ಹೆಸರು /ಕಂಪನಿಯ ಹೆಸರು	ಅತಿ ಹೆಚ್ಚು ಬೆಲೆಯದ್ದು/ ಬ್ರಾಂಡ್‌ಹೆಸರು/ ಕಂಪನಿಯಹೆಸರು	ಎರಡರ ನಡುವಿನ ವ್ಯತ್ಯಾಸ
1	ಝಿಡೋವುಡೀನ್ Ziovudine 100 mg	ಇಲ್ಲ	ರೂ. 7.70/ Zivodir/Cipla	ರೂ. 20.40/ Retrovir / GSK	265%

ಹೃದಯ ರೋಗ, ರಕ್ತದೊತ್ತಡ, ಕೊಲೆಸ್ಟೆರಾಲ್ ಜಾಸ್ತಿಯಾದಾಗ

ನಂ.	ಔಷಧದ ಹೆಸರು	ಬೆಲೆ ನಿಯಂತ್ರಣ ಇರುವಔಷಧ	ಅತಿ ಕಡಿಮೆ ಬೆಲೆಯದ್ದು/ಹೆಸರು/ಕಂಪನಿಯ ಹೆಸರು	ಅತಿ ಹೆಚ್ಚು ಬೆಲೆಯದ್ದು/ ಬ್ರಾಂಡ್‌ಹೆಸರು/ ಕಂಪನಿಯಹೆಸರು	ಎರಡರ ನಡುವಿನ ವ್ಯತ್ಯಾಸ
1	ಪಿಯೋಗ್ಲಿಟಾ ಝೋನ್ Pioglitazone 15 mg	ಇಲ್ಲ	99 ಪೈಸೆ /Pio/Systopic	ರೂ. 6.00/ Piozone / NicholasPira mal	606%
2	ಗ್ಲಿಮೆಪ್ರೈಡ್ Glimepraide 1mg	ಇಲ್ಲ	80 ಪೈಸೆ / Glimestar/ Discovery mankind	ರೂ. 5.30/ Amaryl/ Aventis	696%

ಮಧುಮೇಹಕ್ಕೆ

ನಂ.	ಔಷಧದ ಹೆಸರು	ಬೆಲೆ ನಿಯಂತ್ರಣ ಇರುವಔಷಧ	ಅತಿ ಕಡಿಮೆ ಬೆಲೆಯದ್ದು/ಹೆಸರು/ಕಂಪನಿಯ ಹೆಸರು	ಅತಿ ಹೆಚ್ಚು ಬೆಲೆಯದ್ದು/ ಬ್ರಾಂಡ್‌ಹೆಸರು/ ಕಂಪನಿಯಹೆಸರು	ಎರಡರ ನಡುವಿನ ವ್ಯತ್ಯಾಸ
1	ಪಿಯೋಗ್ಲಿಟಾಝೋನ್ Pioglitazone 15 mg	ಇಲ್ಲ	99 ಪೈಸೆ /Pio/Systopic	ರೂ. 6.00/ Piozone / NicholasPiramal	606%
2	ಗ್ಲಿಮೆಪ್ರೈಡ್ Glimepraide 1mg	ಇಲ್ಲ	80 ಪೈಸೆ / Glimestar/ Discovery mankind	ರೂ. 5.30/ Amaryl/ Aventis	696%

ಕ್ಯಾನ್ಸರಿಗೆ

ನಂ.	ಔಷಧದ ಹೆಸರು	ಬೆಲೆ ನಿಯಂತ್ರಣ ಇರುವಔಷಧ	ಅತಿ ಕಡಿಮೆ ಬೆಲೆಯದ್ದು/ಹೆಸರು/ ಕಂಪನಿಯ ಹೆಸರು	ಅತಿ ಹೆಚ್ಚು ಬೆಲೆಯದ್ದು/ ಬ್ರಾಂಡ್‌ಹೆಸರು/ ಕಂಪನಿಯಹೆಸರು	ಎರಡರ ನಡುವಿನ ವ್ಯತ್ಯಾಸ
1	ಟಾಮೋಕ್ಸಿಫೆನ್ Tamoxifen 10 mg.	ಇಲ್ಲ	ರೂ. 2.70 / Tamodex/ Biochem	ರೂ. 20.00/ Nolvadex / ICI	741%
2	ಲೆಟ್ರೊಝೋಲ್ Letrozole 2.5 mg	ಇಲ್ಲ	ರೂ.9.90/Oncolet / Biochem	ರೂ. 181.50/ Femara/ Novartis	1833%

ಮನೋರೋಗಕ್ಕೆ

ನಂ.	ಔಷಧದ ಹೆಸರು	ಬೆಲೆ ನಿಯಂತ್ರಣ ಇರುವಔಷಧ	ಅತಿ ಕಡಿಮೆ ಬೆಲೆಯದ್ದು/ಹೆಸರು/ ಕಂಪನಿಯ ಹೆಸರು	ಅತಿ ಹೆಚ್ಚು ಬೆಲೆಯದ್ದು/ ಬ್ರಾಂಡ್‌ಹೆಸರು/ ಕಂಪನಿಯಹೆಸರು	ಎರಡರ ನಡುವಿನ ವ್ಯತ್ಯಾಸ
1	ರಿಸ್ಪೆರಿಡೋನ್ Rispiridone 200 mg	ಇಲ್ಲ	ರೂ. 1.69 Respidon/Cipla	ರೂ. 27.00/ Risperdal / Ethnor	1598%

ಜೀರ್ಣಾಂಗದ ಸಮಸ್ಯೆಗೆ

ನಂ.	ಔಷಧದ ಹೆಸರು	ಬೆಲೆ ನಿಯಂತ್ರಣ ಇರುವಔಷಧ	ಅತಿ ಕಡಿಮೆ ಬೆಲೆಯದ್ದು/ಹೆಸರು/ ಕಂಪನಿಯ ಹೆಸರು	ಅತಿ ಹೆಚ್ಚು ಬೆಲೆಯದ್ದು/ ಬ್ರಾಂಡ್‌ಹೆಸರು/ ಕಂಪನಿಯಹೆಸರು	ಎರಡರ ನಡುವಿನ ವ್ಯತ್ಯಾಸ
1	ರೆಸೆಡ್ರೊನೇಟ್ Risedronate 35 mg	ಇಲ್ಲ	ರೂ. 50.12/ Risofos/Cipla	ರೂ. 500.00/ Actonel / Aventis	997%

ಸಂದುನೋವಿಗೆ

ನಂ.	ಔಷಧದ ಹೆಸರು	ಬೆಲೆ ನಿಯಂತ್ರಣ ಇರುವಔಷಧ	ಅತಿ ಕಡಿಮೆ ಬೆಲೆಯದ್ದು/ಹೆಸರು/ ಕಂಪನಿಯ ಹೆಸರು	ಅತಿ ಹೆಚ್ಚು ಬೆಲೆಯದ್ದು/ ಬ್ರಾಂಡ್‌ಹೆಸರು/ ಕಂಪನಿಯಹೆಸರು	ಎರಡರ ನಡುವಿನ ವ್ಯತ್ಯಾಸ
1	ಲೆಫ್ಲುನೋಮೈಡ್ Leflunomide 200 mg	ಇಲ್ಲ	ರೂ. 8.00 Rumalet/Zydus/ Cadila	ರೂ. 44.00/ Arava / Aventis	550%



ಔಷಧಗಳ ಬೆಲೆ ನಿಯಂತ್ರಣ ಪ್ರಯತ್ನಗಳು

ಭಾರತದಲ್ಲಿ ಔಷಧಗಳ ಬೆಲೆಯ ನಿಯಂತ್ರಣ ಪ್ರಯತ್ನಗಳಾಗಿಯೇ ಇಲ್ಲವೇ? ಖಂಡಿತ ಆಗಿದೆ. 1962 ರಲ್ಲಿ ಚೀನಾ ದೇಶ ಭಾರತದ ಮೇಲೆ ಯುದ್ಧ ಸಾರಿದಾಗ ತುರ್ತು ಪರಿಸ್ಥಿತಿಯ ಘೋಷಣೆ ಆಯಿತು. ಏರುತ್ತಿರುವ ಔಷಧ ಬೆಲೆಯನ್ನು ನಿಯಂತ್ರಿಸಲು ಭಾರತ ರಕ್ಷಣಾ ಕಾನೂನನ್ನು ಬಳಸಲಾಯಿತು. 1962 ರಲ್ಲಿ ಔಷಧ ಆಜ್ಞೆ, 1963 ರಲ್ಲಿ ಔಷಧ ಬೆಲೆ ನಿಯಂತ್ರಣ ಆಜ್ಞೆಗಳನ್ನು ಜಾರಿಗೊಳಿಸಲಾಯ್ತು. ಪರಿಣಾಮವಾಗಿ 1963ರ

ಏಪ್ರಿಲ್ ಮೊದಲ ವಾರದಿಂದ ಔಷಧಗಳ ಬೆಲೆ ನಿಯಂತ್ರಣಕ್ಕೆ ಬಂತು. 1966 ರಲ್ಲಿ ಔಷಧಗಳ ಬೆಲೆ (ಪ್ರದರ್ಶನ ಮತ್ತು ಮಾರಾಟ) ಆಜ್ಞೆ 1966ರ ಮತ್ತು ಅವಶ್ಯಕ ವಸ್ತುಗಳ ಕಾಯ್ದೆ 1955ರ ಅಡಿಯಲ್ಲಿ 1970ರ ಔಷಧ ಬೆಲೆ ನಿಯಂತ್ರಣ ಕಾಯಿದೆ ಜಾರಿಗೊಂಡಿತು. ಆ ನಂತರ 1978 ರ ಔಷಧ ನೀತಿ ಸಂಹಿತೆಯಡಿಯಲ್ಲಿ ಔಷಧ (ಬೆಲೆ ನಿಯಂತ್ರಣ) ಆಜ್ಞೆ 1979 ಇದು ಹಾಥಿ ಸಮಿತಿ ವರದಿಯ ನಂತರ ಬಂದ ಕಾಯಿದೆ. ಔಷಧೋತ್ಪಾದನೆಯಲ್ಲಿ ಸಾರ್ವಜನಿಕ ರಂಗದ ಮಹತ್ವವನ್ನು ಸಾರುವ, ರಾಷ್ಟ್ರೀಯ ಔಷಧ ನಿಗಮ ಸ್ಥಾಪನೆ, ವಿದೇಶೀ ಕಂಪನಿಗಳಿಗಿಂತಲೂ ದೇಶೀ ಕಂಪನಿಗಳಿಗೆ ಆದ್ಯತೆ ಕೊಡುವ, ಕಚ್ಚಾ ವಸ್ತುಗಳನ್ನು ಸ್ಥಳೀಯವಾಗಿ ಉತ್ಪಾದಿಸುವುದು, ಔಷಧಗಳ ಬೆಲೆಯಲ್ಲಿ ಆದ್ಯತಾ ನಿಯಂತ್ರಣ ಮುಂತಾದ 224 ಸೂಚನೆಗಳನ್ನು ಈ ನೀತಿ ಸಂಹಿತೆಯಲ್ಲಿ ಅಳವಡಿಸಲಾಯಿತು. ಇದಕ್ಕಿಂತಲೂ 1970ರ ಭಾರತ ಬೌದ್ಧಿಕ ಸ್ವಾಮ್ಯಹಕ್ಕು ಕಾಯಿದೆಯೇ ಔಷಧಗಳ ಬೆಲೆ ನಿಯಂಂತ್ರಣದ ಮೇಲೆ ಹೆಚ್ಚು ಪರಿಣಾಮ ಬೀರಿತು. ಈ ಕಾಯಿದೆಯಿಂದಾಗಿಯೇ ಭಾರತದ ಔಷಧ ಕಂಪನಿಗಳು ಜಗತ್ತಿನೆಲ್ಲೆಡೆ ಪ್ರಸಿದ್ಧಿಯಾಗುವಂತಾಯಿತು.

ಖರೇ ಹೇಳಬೇಕೆಂದ್ರೆ ನಾನು ಒಂದು ದೊಡ್ಡ ಕಂಪನಿಯಲ್ಲಿ ಒಳ್ಳೆ ಕೆಲಸದಲ್ಲಿ ಇದ್ದೋನೇ.
ಸಾಮಾನ್ಯ ನೆಗಡಿ ಬಂತೆಂದು ಇಲ್ಲಿಗೆ ಬಂದೆ. ಅಡ್ಮಿಟ್ ಆಗು ಅಂದ್ರು. ಆದೆ. ಡಾಕ್ಟರುಗಳು
ಎಲ್ಲಾ ಡಯಾಗ್ನೋಸು, ಟ್ರೀಟ್‌ಮೆಂಟು ಎಲ್ಲವನ್ನೂ ಮಾಡಿವ ನಂತರ ಈ ಸ್ಥಿತಿಯಲ್ಲಿ ಡಿಸ್
ಚಾರ್ಜ್ ಮಾಡಿದ್ರು.

1979ರ ಔಷಧ ಬೆಲೆ ನಿಯಂತ್ರಣಾ ಆಜ್ಞೆಯ ನಂತರ ಔಷಧ ಬೆಲೆ ನಿಯಂತ್ರಣ ಸಾಕಷ್ಟು ಕಡಿಮೆಯಾಗುತ್ತ ಬಂದಿದೆ. ಬೆಲೆ ನಿಯಂತ್ರಣ ಮಾಡುವ ಪದ್ಧತಿಯಲ್ಲಿಯೇ ಸಮಸ್ಯೆಯ ಮೂಲ ಅಡಗಿದೆ. 90ರ ದಶಕದ ನಂತರ ಉದ್ದಿಮೆ ಮತ್ತು ವ್ಯಾಪಾರದ ಬಗ್ಗೆ ನೀತಿ ಸಂಹಿತೆ ನಿರೂಪಕರ ದೃಷ್ಟಿಕೋನವೇ ಬದಲಾಗಿದೆ. ಆರ್ಥಿಕ ನೀತಿ ಬದಲಾವಣೆಯೆಂದರೆ ಲೈಸೆನ್ಸ್‌ಗಳನ್ನು ತೆಗೆದುಹಾಕುವುದು ಎಂದಾಗಿದೆ. ಹಿಂದೆ ಇದ್ದ ಭ್ರಷ್ಟಾಚಾರ ಈ ನೀತಿಯಿಂದಾಗಿ ತೊಲಗುತ್ತದೆ ಎಂಬ ಆಶಯ ಇತ್ತು. ಉದಾರೀಕರಣ ನೀತಿ ಬಂತು. ಆಗಿನಿಂದ ಆರೋಗ್ಯ ಮತ್ತು ಶಿಕ್ಷಣ ರಂಗದಲ್ಲಿ ಕೂಡ ಸರಕಾರದ ಪಾತ್ರವು ಕಡಿಮೆ ಆಗುತ್ತಲೇ ಬಂದಿದೆ. ಎಲ್ಲವನ್ನೂ ಮಾರುಕಟ್ಟೆ ನೋಡಿಕೊಳ್ಳುತ್ತದೆ ಎಂಬ ಹುಚ್ಚು ನಂಬಿಗೆ. ಆಗಿನಿಂದಲೂ ಬೆಲೆ ನಿಯಂತ್ರಣ ಎಂಬುದು ಬರಿಯ ಶಬ್ದವಾಗಿ ಉಳಿದಿದ್ದು 2002ರ ಔಷಧ ನೀತಿ ಸಂಹಿತೆಯ ಮುಖ್ಯ ಉದ್ದೇಶ ಬೆಲೆ ನಿಯಂತ್ರಣ ಮಾತ್ರ ಆಗಿದೆ.

ಕಂಪನಿಗಳಿಗೆ ಬೆಲೆ ನಿಯಂತ್ರಣವು ಇಷ್ಟವಾಗುವುದಿಲ್ಲ. 30–34 ಔಷಧಗಳು ಮಾತ್ರವೇ ಬೆಲೆ ನಿಯಂತ್ರಣದೊಳಗೆ ಇರಬೇಕೆಂಬುದು ಉದ್ದಿಮೆಯ ಆಶಯ.

ಬೇರೆ ಬೇರೆ ದೇಶಗಳಲ್ಲಿ ಔಷಧಗಳ ಬೆಲೆ ನಿಯಂತ್ರಣ

ಜಗತ್ತಿನಲ್ಲಿ ಸ್ವತಂತ್ರ ಮಾರುಕಟ್ಟೆಯ ಪ್ರತಿಪಾದಕ ದೇಶಗಳಾದ ಯುರೋಪು, ಇಂಗ್ಲೆಂಡುಗಳಲ್ಲಿ ಕೂಡಾ ಔಷಧ ಬೆಲೆ ನಿಯಂತ್ರಣ, ಉತ್ಪಾದನೆಯ ಪ್ರಮಾಣ ನಿಯಂತ್ರಣ ಮತ್ತು ಖರ್ಚು ನಿಭಾಯಿಸುವ ನಿಯಂತ್ರಣ ನೀತಿಗಳಿವೆ. ಪಶ್ಚಿಮ ಯುರೋಪಿನ 16 ದೇಶಗಳಲ್ಲಿ ಔಷಧಗಳ ಬೆಲೆಯನ್ನು ನೇರವಾಗಿ ನಿಯಂತ್ರಿಸಲಾಗುತ್ತದೆ. ಆದರೆ ಭಾರತದಲ್ಲಿ ಮಾತ್ರ ಸರಕಾರಗಳು, ನೀತಿ ನಿರೂಪಕರು ಇದು ತಮ್ಮ ಜವಾಬ್ದಾರಿಯೇ ಅಲ್ಲವೆಂಬಂತೆ ಜಾರಿಕೊಳ್ಳುತ್ತಿದ್ದಾರೆ.

ಅಮೆರಿಕಾವನ್ನು ಹೊರತುಪಡಿಸಿ ಜಗತ್ತಿನ ಎಲ್ಲಾ ದೇಶಗಳಲ್ಲಿ ಔಷಧ ಬೆಲೆಯನ್ನು ನಿಯಂತ್ರಿಸುವ ರೂಢಿ ಇದ್ದೇ ಇದೆ. ಅಮೆರಿಕಾದಲ್ಲಿಯೂ ಕೂಡ ವಿಮಾ ಕಂಪನಿಗಳು ಔಷಧ ಕಂಪನಿಗಳೊಂದಿಗೆ ಯೋಗ್ಯ ಬೆಲೆಗಾಗಿ ಚೌಕಾಸಿಗಿಳಿಯುತ್ತವೆ. ಆದರೆ ವಿಮೆ ಪಡೆದವರಿಗೆ ಮಾತ್ರ ಇದರ ಲಾಭ. ಆರೋಗ್ಯ ವಿಮೆ ಇಲ್ಲದ ಬಡವರಿಗೆ ಮತ್ತು ವೃದ್ಧರಿಗೆ ದುಬಾರಿ ಬೆಲೆಯ ಔಷಧಗಳೇ ಗತಿ. 2001–2002ರಲ್ಲಿ ಮೂರರಲ್ಲಿ ಒಬ್ಬ ನಾಗರಿಕ ಅಂದರೆ 74.7 ದಶಲಕ್ಷ ಜನರು ಆರೋಗ್ಯ ವಿಮೆ ಯೋಜನೆಯ ಹೊರಗುಳಿದಿದ್ದರು. ದುರದೃಷ್ಟದಿಂದ ಭಾರತವು ಅಮೆರಿಕಾವನ್ನೇ ಅನುಸರಿಸಲು ಹೊರಟಿದೆ.

ಇಂಗ್ಲೆಂಡಿನಲ್ಲಿ ಔಷಧ ಬೆಲೆ ನಿಯಂತ್ರಣ ಯೋಜನೆ ಇದೆ. ಯುರೋಪಿನ ಒಕ್ಕೂಟದ ಎಲ್ಲ ಸದಸ್ಯ ದೇಶಗಳಲ್ಲೂ ಕೂಡ ಬೆಲೆ ನಿಯಂತ್ರಣ ಇದೆ. ಈ ದೇಶಗಳು ಅಕ್ಕಪಕ್ಕದ ದೇಶಗಳಲ್ಲಿ ಬೇರೆ ವಸ್ತುಗಳ ಬೆಲೆ ಮತ್ತು ಔಷಧಗಳ ಬೆಲೆ ಹೇಗಿವೆ ಎಂದು ಹೋಲಿಸಿ ನೋಡಿ ಬೆಲೆ ನಿಗದಿ ಮಾಡುತ್ತವೆ. ಡೆನ್ಮಾರ್ಕ, ಗ್ರೀಸ್, ಫಿನ್‌ಲ್ಯಾಂಡ್, ಐರ್ಲೆಂಡ್, ಇಟಲಿ, ನೆದರ್‌ಲೆಂಡ್, ಪೋರ್ತುಗಲ್ ದೇಶಗಳು ಪಕ್ಕದ ದೇಶಗಳಲ್ಲಿ ಇರುವ ಬೆಲೆಯೊಂದಿಗೆ ಹೋಲಿಕೆ ಮಾಡಿ ತಮ್ಮಲ್ಲಿ ಎಷ್ಟು ಬೆಲೆ ಏರಿಸಬಹುದೆಂಬ ಗರಿಷ್ಠ ಬೆಲೆ ಇಡುತ್ತಾರೆ. ಬೆಲ್ಜಿಯಂ, ಫ್ರಾನ್ಸ್‌ಗಳು ಪಕ್ಕದ ದೇಶಗಳ ಬೆಲೆಯನ್ನು ನೋಡುತ್ತವೆ, ದೇಶದ ಆರ್ಥಿಕತೆಗೆ ಔಷಧ ಉದ್ದಿಮೆಯ ಕೊಡುಗೆಯನ್ನು ಗಮನಿಸುತ್ತವೆ, ವೆಚ್ಚವನ್ನೂ ಕೂಡ ಪರಿಗಣಿಸಿ ಬೆಲೆ ನಿಗದಿ ಮಾಡುತ್ತವೆ. ಆಸ್ಟ್ರೇಲಿಯಾ, ಸ್ಪೇನ್‌ಗಳಲ್ಲಿ ಔಷಧ ತಯಾರಿಕಾ ವೆಚ್ಚ ನೋಡಿ, ಇತರ ರಿಯಾಯತಿ ಯೋಜನೆಗಳನ್ನು ಅನುಸರಿಸಿ ಬೆಲೆ ನಿಗದಿ ಮಾಡುತ್ತವೆ.

ಕೆನಡಾ ದೇಶದಲ್ಲಿ 'ಪೇಟೆಂಟ್ ಆದ ಔಷಧಗಳ ಬೆಲೆ ವಿಮರ್ಶಾ ನಿಗಮ' ಇದೆ. ಫ್ರಾನ್ಸ್‌ನಲ್ಲಿ, 'ಟ್ರಾನ್ಸ್‌ಫೆರನ್ಸಿ ಕಮಿಶನ್ ಮತ್ತು ಎಕಾನಾಮಿಕ್ ಕಮಿಶನ್' ಇದೆ, ಈಜಿಪ್ಟಿನಲ್ಲಿ ಎಲ್ಲಾ ಔಷಧಗಳೂ ಬೆಲೆ ನಿಯಂತ್ರಣದೊಳಗೆ ಇವೆ. ಜಪಾನು, ನೆದರ್‌ಲೆಂಡ್, ಚೀನಾ, ಇಂಡೋನೇಶ್ಯಾ, ಕೋಲಂಬಿಯಾ ಮುಂತಾದ ದೇಶಗಳಲ್ಲಿ ಒಂದಲ್ಲ ಒಂದು ರೀತಿಯ ಬೆಲೆ ನಿಯಂತ್ರಣ ಮತ್ತು ಮೇಲ್ವಿಚಾರಣೆ ಇದ್ದೇ ಇದೆ. ಈ ಕೆಲವು ದೇಶಗಳಲ್ಲಿ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆಯ ಮರುಪಾವತಿ ಮತ್ತು ವಿಮಾ ಯೋಜನೆಗಳ ಜೊತೆಗೆ ಔಷಧಗಳ ಬೆಲೆಯನ್ನೂ ಜೋಡಿಸಲಾಗುತ್ತದೆ. ಅದಕ್ಕೆ ಪ್ರತಿಯಾಗಿ, 'ದೇಶಗಳೊಳಗಿನ ಬೆಲೆ ನಿಯಂತ್ರಣ ನೀತಿಗಳು ಅಂತರಾಷ್ಟ್ರೀಯ ವ್ಯಾಪಾರಕ್ಕೆ ಹೊಡೆತವನ್ನು ಕೊಡುತ್ತವೆ' ಎಂದು ಅಮೆರಿಕಾ ಮತ್ತು ಯುರೋಪಿನ ಔಷಧ ಕಂಪನಿಗಳ ಸಂಘಟನೆಗಳು ಕೂಗಾಡುತ್ತವೆ. ಇದರ ವಿರುದ್ಧ ಅಮೆರಿಕಾ ಸರ್ಕಾರ ಕ್ರಮ ತಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿವೆ. ವಿಪರ್ಯಾಸವೆಂದರೆ, ಮುಕ್ತ ಮಾರುಕಟ್ಟೆಯನ್ನು ಬೋಧಿಸುವ ಅಮೆರಿಕಾ ಹಾಗೂ ಯುರೋಪಿನಂಥ ದೇಶಗಳಲ್ಲಿ ಕೂಡಾ ಒಂದಲ್ಲ ಒಂದು ರೀತಿಯಲ್ಲಿ ಔಷಧಗಳ ಬೆಲೆ ನಿಯಂತ್ರಣ ಇದೆ. ಅಲ್ಲಿ ಕಾನೂನಿಗೆ ತಲೆಗಾಗುವ ಅಲ್ಲಿನ ಕಂಪನಿಗಳು ಭಾರತದಂಥ ದೇಶಕ್ಕೆ ಬಂದಾಗ ಬೆಲೆ ನಿಯಂತ್ರಣ ಮಾಡಬೇಡಿ ಎನ್ನುತ್ತವೆ. ಮುಕ್ತ ಮಾರುಕಟ್ಟೆಯೇ ಇರಲಿ ಎನ್ನುತ್ತವೆ.

ಬೆಲೆ ನಿಯಂತ್ರಣ ಮಾಡಿದರೆ ತಮಗೆ ಔಷಧ ಸಂಶೋಧನೆಗೆ ಹಣ ಉಳಿಯುವುದಿಲ್ಲ ಎಂದು ಭಾರತದ ಕಂಪನಿಗಳ ಅಳಲು. ಆದರೆ, ಅಮೆರಿಕಾ, ಯುರೋಪುಗಳಲ್ಲಿ ಬೆಲೆ ನಿಯಂತ್ರಣ

ಇದ್ದಾಗಲೂ ಕೂಡ ಅಲ್ಲಿ ಔಷಧಗಳ ಸಂಶೋಧನೆಗೆ ಔಷಧ ಮಾರಾಟದಿಂದ ಬಂದ ಲಾಭವನ್ನೇ ಬಳಸಲಾಗುತ್ತಿದೆ.

ಭಾರತದಲ್ಲಿ ಬಹು ಜನರಿಗೆ ಆರೋಗ್ಯ ವಿಮೆ ಇಲ್ಲ, ಔಷಧ ಬೆಲೆ ನಿಯಂತ್ರಣವೂ ಇಲ್ಲ. ಹೀಗಿರುವಾಗ ಹೆಚ್ಚಿನ ಜನಸಂಖ್ಯೆಯ ಪರಿಸ್ಥಿತಿ ಏನಾಗುತ್ತಿರಬಹುದೆಂದು ಊಹಿಸಿ. ಕೇವಲ ಬಡವರಷ್ಟೇ ಅಲ್ಲ, ಮಧ್ಯಮ ವರ್ಗದ ಜನರಿಗೂ ಕೂಡ ಅನಾರೋಗ್ಯ ಬಂತೆಂದರೆ ಪರಿಸ್ಥಿತಿ ಅಸಹನೀಯ.

ಬೆಲೆ ನಿಯಂತ್ರಣ ನೀತಿಯಲ್ಲಿ ಇರುವ ಸಮಸ್ಯೆಗಳು

ಔಷಧ ಬೆಲೆ ನಿಯಂತ್ರಣ ಪುನರ್ ವಿಮರ್ಶಾ ಸಮಿತಿಯ ವರದಿಯ ಪ್ರಕಾರ,

'ಬಹಳಷ್ಟು ದೇಶಗಳಲ್ಲಿ ಸರಕಾರಗಳೇ ಸಾಮಾಜಿಕ ಆರೋಗ್ಯ ಮತ್ತು ವಿಮಾ ಯೋಜನೆಗಳಲ್ಲಿ ಆಸ್ಪತ್ರೆ ಮತ್ತು ಔಷಧಗಳಿಗಾಗಿ ಹಣ ತೊಡಗಿಸಿರುತ್ತವೆ. ಹೀಗಾಗಿ ಔಷಧಗಳ ಬೆಲೆ ನಿಯಂತ್ರಣ ಸರಕಾರಕ್ಕೇ ಬೇಕಾಗಿರುತ್ತದೆ. ಆರೋಗ್ಯ ಇಲಾಖೆಯತ್ತ ಸರಕಾರದ ವೆಚ್ಚ ಕಡಿಮೆ ಆಗಬೇಕೆಂದರೆ ಔಷಧಗಳ ಬೆಲೆ ಕಡಿಮೆ ಇರಬೇಕು. ಆರೋಗ್ಯ ವಿಮೆ ಮತ್ತು ಸಾಮಾಜಿಕ ಆರೋಗ್ಯ ಯೋಜನೆಗಳ ಮೂಲಕ ಸರಕಾರವೇ ಆರೋಗ್ಯ ಸಂಬಂಧಿ ಖರ್ಚನ್ನು ನೋಡಿಕೊಳ್ಳುವುದರಿಂದ ಜನರಿಗೆ ಔಷಧಗಳ ಬೆಲೆಯ ನೇರ ಪರಿಣಾಮ ತಟ್ಟುವುದಿಲ್ಲ. ಆದರೆ ಭಾರತದಲ್ಲಿ ಹಾಗಲ್ಲ. ಅತಿ ಹೆಚ್ಚಿನ ಜನರಿಗೆ ವಿಮೆಯ ರಕ್ಷಣೆ ಇಲ್ಲ. ಹೀಗಾಗಿ ಔಷಧಗಳ ಬೆಲೆ ಹೆಚ್ಚಳ ನೇರವಾಗಿ ಅವರನ್ನೇ ಬಾಧಿಸುತ್ತದೆ. ಕೈಯಿಂದ ಹಣ ಕೊಡಬೇಕಾಗುತ್ತದೆ. ಈ ಕಾರಣಕ್ಕಾಗಿ ಔಷಧಗಳ ಬೆಲೆ ನಿಯಂತ್ರಣವು ಇಲ್ಲಿ ಅವಶ್ಯ ಆಗಲೇಬೇಕು.'

ತಾನೇ ನೇಮಿಸಿದ ಸಮಿತಿಯ ಸಲಹೆ ಹೀಗಿದ್ದರೂ ಸರಕಾರ ಅದನ್ನು ನಿರ್ಲಕ್ಷ್ಯ ಮಾಡಿದೆ. 2002ರ ಔಷಧ ಬೆಲೆ ನೀತಿಯಲ್ಲಂತೂ ಕಂಪನಿಗಳಿಗೆ 'ಬೆಲೆ ನಿಯಂತ್ರಣದ ಕಾಟವನ್ನು' ಕಡಿಮೆ ಮಾಡಬೇಕು ಎಂದೇ ಹೇಳುತ್ತದೆ. ಇಲ್ಲಿನವರೆಗೆ ಬಂದ ಎಲ್ಲಾ ಔಷಧ ನೀತಿಗಳಲ್ಲೂ ಮಾರುಕಟ್ಟೆಯ ಪಾಲುದಾರಿಕೆ ಮತ್ತು ಉತ್ಪಾದನೆ ಇವೇ ಮುಖ್ಯ ವಿಷಯಗಳಾಗಿವೆ.

- ಅತಿ ಅವಶ್ಯವಾದ ಮತ್ತು ಉಪಯುಕ್ತವಾದ ಔಷಧಗಳನ್ನೂ ಬೆಲೆನಿಯಂತ್ರಣದ ಹೊರಗಿಡಲಾಗಿದೆ.
- ಅನಾಲ್ಜಿನ್, ಫಿನಾಯಿಲ್ ಬ್ಯುಟಾಝೋನ್, ವಿಟಮಿನ್-ಈ, ಸಲ್ಫಡಿಮಿಡಿನ್, ಮೆಬಿಡ್ರೋಲಿನ್, ಡಿಯೋಸ್ಮೈನ್ ಪಾಂಥೋನೇಟ್ ಮತ್ತು ಪಾಂಥಿನಾಲ್‌ಗಳು, ಬಾಕ್‌ಎಂಪಿಸಿಲಿನ್ ಮುಂತಾದ ಅನವಶ್ಯಕ ಮತ್ತು ಅಪಾಯಕಾರಿ ಔಷಧಗಳನ್ನು ಬೆಲೆ ನಿಯಂತ್ರಣದಲ್ಲಿಡಲಾಗಿದೆ.
- ಏಡ್ಸ್ /ಎಚ್.ಐ.ವಿ., ಕ್ಯಾನ್ಸರ್, ರಕ್ತದ ಒತ್ತಡ, ಹೃದಯದ ರಕ್ತನಾಳದ ರೋಗ, ಮಧುಮೇಹ, ಕಬ್ಬಿಣಾಂಶ ಕೊರತೆಯ ರಕ್ತ ಹೀನತೆ, ಧನುರ್ವಾಯು, ಆನೆಕಾಲು, ಹೆಪ್ಯಾಟಿಟಿಸ್ ಬಿ, ಡಿಫ್ತೀರಿಯಾ, ಮೂರ್ಛೆ ರೋಗ, ಹಾವು ಕಡಿತ ಇವೆಲ್ಲವುಗಳ ಔಷಧಗಳನ್ನು, ಜೀವಜಲ, ವಿವಿಧ ಔಷಧಗಳಿಗೆ ಪ್ರತಿರೋಧಕ, ಹುಚ್ಚುನಾಯಿ ಕಡಿತಕ್ಕೆ ಲಸಿಕೆ, ಧನುರ್ವಾಯುಗೆ ಬಳಸುವ ಸೆರಾ, ಇವೆಲ್ಲವನ್ನೂ ಬೆಲೆ ನಿಯಂತ್ರಣದ ಹೊರಗಿಡಲಾಗಿದೆ.
- ಬೆಲೆ ನಿಯಂತ್ರಣವನ್ನು ಮಾರುಕಟ್ಟೆಗೊಪ್ಪಿಸಿದಾಗ ಮಾರುಕಟ್ಟೆಯು ತನ್ನ ಏರಿಳಿತಗಳಿಗೆ ತಕ್ಕಂತೆ ಬೆಲೆಯನ್ನು ಭಾಗಶಃ ಮಾತ್ರ ನಿಯಂತ್ರಿಸುತ್ತದೆ. ಉದಾಹರಣೆಗೆ ಮಲೇರಿಯಾದ ಕ್ಲೋರೋಕ್ವಿನ್ ಗುಳಿಗೆಯು ಬೆಲೆ ನಿಯಂತ್ರಣಕ್ಕೆ ಬರಬಹುದು, ಆದರೆ ಮಲೇರಿಯಾದ ಇತರೆ ಔಷಧಗಳು ನಿಯಂತ್ರಣದಲ್ಲಿರುವುದಿಲ್ಲ.

- ಅತಿ ಹೆಚ್ಚು ಮಾರಾಟವಾಗುವ 300 ಔಷಧಗಳಲ್ಲಿ (ಓ.ಆರ್.ಜಿ. ಸ್ಟೆಲ್ಸನ್ ರ ಪಟ್ಟಿ) ಕೇವಲ 36 ಔಷಧಗಳು ಅಂದರೆ 12% ಔಷಧಗಳು ಮಾತ್ರ ಬೆಲೆ ನಿಯಂತ್ರಣಕ್ಕೊಳಪಟ್ಟಿವೆ.

ನಮ್ಮ ದೇಶದಲ್ಲಿ ರಾಷ್ಟ್ರೀಯ ಔಷಧ ನೀತಿಯೊಂದು ಬೇರೆ ಇರುತ್ತದೆ, ರಾಷ್ಟ್ರೀಯ ಆರೋಗ್ಯ ನೀತಿಯೋಂದು ಬೇರೆ ಇರುತ್ತದೆ. ಎರಡರ ಗುರಿಯೂ ಒಂದೇ ಆಗಿರಬೇಕು. ಆದರೆ ನಿಜಸ್ಥಿತಿಯಲ್ಲಿ ಎರಡರ ಮಧ್ಯೆ ಅಗಾಧವಾದ ವ್ಯತ್ಯಾಸ. ಒಂದು ಔಷಧ ಕಂಪನಿಗಳ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ಬರೆದದ್ದು, ಇನ್ನೊಂದು ದೇಶದ ಜನರ ಆರೋಗ್ಯ ಸಮಸ್ಯೆಗಳ ಕುರಿತು ಮಾತಾಡುವಂಥಾದ್ದು. ಒಂದು ರಾಸಾಯನಿಕ ಮತ್ತು ಗೊಬ್ಬರ ಇಲಾಖೆಗೆ ಸಂಬಂಧಪಟ್ಟಿದ್ದು, ಇನ್ನೊಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದ್ದು. ಒಂದಕ್ಕೆ ಬೇನೆಯಾದರೆ ಇನ್ನೊಂದಕ್ಕೆ ಗೊತ್ತೂ ಆಗಲಾರದಂಥ ಪರಿಸ್ಥಿತಿ.

ರಾಸಾಯನಿಕ ಮತ್ತು ಗೊಬ್ಬರ ಇಲಾಖೆಗೆ ಸಂಬಂಧಿಸಿದ ಸ್ಥಾಯಿ ಸಮಿತಿಯು 2005-06 ರ ಲೋಕಸಭೆಗೆ ಅರ್ಪಿಸಿದ ತನ್ನ ವರದಿಯಲ್ಲಿ ಹೀಗೆ ಹೇಳುತ್ತದೆ:

'ಉತ್ಪಾದನೆಗಳ ಬೆಲೆಯು ಈ ಮಿತಿಯನ್ನು ಮೀರಿ ಹೋಗುವಂತಿಲ್ಲ ಎಂದು ಸ್ಪಷ್ಟವಾದ ನಿಲುವು ತಳೆಯಲು ಸರಕಾರಕ್ಕೆ ಅವಕಾಶ ಇದೆಯಾದರೂ ಅದನ್ನು ಒಮ್ಮೆಯೂ ಪಾಲಿಸಿಲ್ಲ. 'ಕ್ಯಾನ್ಸರ್ ಔಷಧಗಳು, ಕೆಲವು ಎಂಟಿಬಯಾಟಿಕ್‌ಗಳು ನ್ಯುಟ್ರಸಿಟಿಕಲ್ಸ್ ಹಾಗು ಸಿಟ್ರಝೀನ್‌ಗಳ ಬೆಲೆ ನಿಯಂತ್ರಣಕ್ಕಾಗಿ ಈ ಅವಕಾಶವನ್ನು ಉಪಯೋಗಿಸಿ' ಎಂದು ಕೆಲವು ರಾಜ್ಯ ಸರಕಾರಗಳು ಕೇಳಿಕೊಂಡಾಗಲೂ ರಾಷ್ಟ್ರೀಯ ಔಷಧ ಬೆಲೆ ನಿಯಂತ್ರಣ ಮಂಡಳಿಯು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿತೇ ಹೊರತು ಮತ್ತೇನನ್ನೂ ಮಾಡಲಿಲ್ಲ. ಸ್ಥಾಯಿ ಸಮಿತಿಗೆ ಈ ಕುರಿತು ಬಹಳ ಬೇಸರವಿದೆ. ಇದು ಹೀಗಾಗಬಾರದೆಂದು ಆಶಿಸುತ್ತ ಸಮಿತಿಯು ಕಡೇ ಪಕ್ಷ ಒಂದೇ ತೆರನ ಔಷಧಗಳಿಗೆ ಸರಕಾರವು ಬೆಲೆಯ ಒಂದು ಮಿತಿಯನ್ನು ಹಾಕಿ ಅದಕ್ಕಿಂತ ಜಾಸ್ತಿ ಬೆಲೆ ಆಗಗೊಡಬಾರದೆಂದು ಸೂಚಿಸುತ್ತದೆ.

ಇನ್ನಿತರ ತಜ್ಞ ಸಮಿತಿಗಳ ವರದಿಗಳು

ಉದಾರೀಕರಣ, ಜಾಗತೀಕರಣಗಳ ಕಾಲದಲ್ಲಿಯೂ ಕೂಡ ಸರಕಾರವು ಔಷಧಗಳ ಬೆಲೆಯ ವಿಷಯದಲ್ಲಿ ಸಮಿತಿಗಳನ್ನು ನೇಮಿಸಿತ್ತು. ಸರಕಾರವು ಔಷಧಗಳ ಬೆಲೆಯನ್ನು

ನಿಯಂತ್ರಿಸುವ ಅಗತ್ಯ ಎಷ್ಟಿದೆ ಎಂದು ಅವೂ ಕೂಡ ಮತ್ತೆ ಮತ್ತೆ ಒತ್ತಿ ಹೇಳಿವೆ. 1999 ರ ಔಷಧ ಬೆಲೆ ನಿಯಂತ್ರಣ ವಿಮರ್ಶಾ ಸಮಿತಿ, 2004 ರ ಸಂಧು ಸಮಿತಿ, 2005 ರ ಆರ್ಥಿಕ ವಿಚಾರಗಳ ಸಮಿತಿ ಇವೆಲ್ಲವೂ ಬೆಲೆ ನಿಯಂತ್ರಣದ ಬಗ್ಗೆ ಹೇಳಿವೆಯಾದರೂ ಯಾವುದೇ ರೀತಿಯ ನಿರ್ಬಂಧ ಕಂಪನಿಗಳಿಗೆ ಬೇಕಿಲ್ಲ . ಕಂಪನಿಗಳ ಆಶಯದಂತೆಯೇ ಸರಕಾರಗಳೂ ವರ್ತಿಸುತ್ತಿದ್ದು 1979 ರಲ್ಲಿ 347 ಔಷಧಗಳು ಬೆಲೆ ನಿಯಂತ್ರಣದಲ್ಲಿ ಇದ್ದುದು 1995 ರ ಹೊತ್ತಿಗೆ ಅದು 74ಕ್ಕಿಳಿಯಿತು. ಆ ವೇಳೆಗೆ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ಬಂದಿದ್ದರಿಂದ ಅದು ಇನ್ನೂ ಕೆಳಗಿಳಿದು 30 ಕ್ಕೆ ತಲುಪುವುದು ತಪ್ಪಿತು. ಮೊದಲಿಗೆ ಅವಶ್ಯಕ ಔಷಧಗಳ ಪಟ್ಟಿ ತಯಾರಿಸಿ, ನಂತರ ಔಷಧದ ಬೆಲೆ ನಿಯಂತಣದ ಬಗ್ಗೆ ವಿಚಾರ ಮಾಡಿ ಎಂದು ಕೋರ್ಟು ಸರಕಾರಕ್ಕೆ ಸಲಹೆ ಮಾಡಿದೆ.

ಬೆಲೆ ನಿಯಂತ್ರಣ : ಟ್ರಿಪ್ಸ್ ಒಪ್ಪಂದಕ್ಕೆ ವಿರುದ್ಧವೆ?

ಟ್ರಿಪ್ಸ್ ಎಂದರೆ ವ್ಯಾಪಾರ ಸಂಬಂಧೀ ಬೌದ್ಧಿಕ ಸ್ವಾಮ್ಯ ಹಕ್ಕು. ಯಾವುದೇ ವಸ್ತು ಪೇಟೆಂಟ್ ಆಗಿದ್ದರೆ ಅದನ್ನು ಇನ್ನಾರೂ ಮಾರಾಟ ಮಾಡುವಂತಿಲ್ಲ. ಮಾರಾಟದ ಹಕ್ಕು ಪಡೆಯುವವರು ಪೇಟೆಂಟ್ ಪಡೆದ ಕಂಪನಿಗೆ ರಾಯಧನ ಕೊಡುತ್ತಿರಬೇಕು. ಜಾಗತೀಕರಣದ ಈ ದಿನಗಳಲ್ಲಿ ಔಷಧ ಮತ್ತು ಜೈವಿಕ ವಸ್ತುಗಳೆಲ್ಲದರ ಮೇಲೆ ಪೇಟೆಂಟ್ ಎಂಬುದು ವಸ್ತುಗಳ ಬೆಲೆಯನ್ನು ಬಹುವಾಗಿ ಏರಿಸುತ್ತದೆ. ದೇಶ ದೇಶಗಳ ಮಧ್ಯೆ ಟ್ರಿಪ್ಸ್ ಒಪ್ಪಂದ ವ್ಯಾಪಾರ ವ್ಯವಹಾರವನ್ನು ನಿಯಂತ್ರಿಸುತ್ತಿದೆ. ಔಷಧಗಳ ಬೆಲೆ ಮತ್ತು ಟ್ರಿಪ್ಸ್ ಒಪ್ಪಂದದ ಕುರಿತು 2002 ರಲ್ಲಿ ಖತಾರ್ ನ ದೋಹಾ ಎಂಬಲ್ಲಿ ಬಹು ಮುಖ್ಯವಾದ ಜಾಗತಿಕ ಒಪ್ಪಂದ ನಡೆಯಿತು. ಇದನ್ನೇ **ದೋಹಾ ಘೋಷಣೆ** ಎನ್ನುತ್ತಾರೆ.

- ಔಷಧಗಳ ಬೆಲೆ ನಿಯಂತ್ರಣದ ಕುರಿತು ಟ್ರಿಪ್ಸ್ ಒಪ್ಪಂದ ಏನೂ ಹೇಳುವುದಿಲ್ಲ.
- ದೋಹಾ ಘೋಷಣೆಯ 7 ನೇ ಪರಿಚ್ಛೇದ ಮತ್ತು 8 ನೇ ಪರಿಚ್ಛೇದಗಳು ತಮ್ಮ ದೇಶಗಳ ನಾಗರಿಕರ ಆರೋಗ್ಯ ಕಾಪಾಡುವ ಬದ್ಧತೆ ಆಯಾ ದೇಶದ ಸರಕಾರಗಳ ಹಕ್ಕಾಗುತ್ತದೆ ಎಂದು ಹೇಳುತ್ತವೆ.
- ಕಂಪಲ್ಸರಿ ಲೈಸೆನ್ಸ್‌ಗಳನ್ನು ಯಾವ ಭೂಮಿಕೆಯ ಆಧಾರದ ಮೇಲೆ ನೀಡಬೇಕೆಂಬ ನಿರ್ಧಾರ ಮಾಡುವ ಸ್ವಾತಂತ್ರ್ಯ ಆಯಾ ದೇಶಕ್ಕಿದೆ ಎಂದೂ ದೋಹಾ ಘೋಷಣೆಯು ಹೇಳುತ್ತದೆ.

- ಆರೋಗ್ಯ ಮತ್ತು ಮಾನವ ಹಕ್ಕುಗಳ ಚಾರಕ್ಕೆ ಬಂದಾಗ ವ್ಯಾಪಾರಕ್ಕೆ ಮೊದಲ ಆದ್ಯತೆ ಸಲ್ಲದು.
- ಭಾರತದ ಪೇಟೆಂಟ್ ಕಾಯಿದೆಯ ಪ್ರಕಾರ 'ಯಾವುದೇ ಬೌದ್ಧಿಕ ಸ್ವಾಮ್ಯ ಹಕ್ಕಿಗೊಳಪಟ್ಟ ಔಷಧವು ಖರೀದಿ ಮಾಡಲು ಅಸಾಧ್ಯವೆನಿಸುವ ಸ್ಥಿತಿ ಉಂಟಾಯಿತೆಂದರೆ ಅವನ್ನು ಕಡಿಮೆ ಪ್ರಮಾಣದಲ್ಲಿ ಉತ್ಪಾದಿಸಲು ಸ್ಥಳೀಯ ಕಂಪನಿಗಳಿಗೆ ಕಂಪಲ್ಸರಿ ಲೈಸನ್ಸ್ ನೀಡಬಹುದು.

ಸಲಹೆಗಳು

ದೇಶದ ಜನತೆಯ ಹಸಿವು ನೀಗಿಸುವಲ್ಲಿ, ಆರೋಗ್ಯ ಕಾಪಾಡುವಲ್ಲಿ ಮತ್ತು ಶಿಕ್ಷಣ ನೀಡುವಲ್ಲಿ ಸರಕಾರದ ಪಾತ್ರವು ಈ ಉದಾರೀಕರಣದ ಯುಗದಲ್ಲಿಯೂ ಅತಿ ಮಹತ್ವದ್ದಾಗಿದೆ. ಸರಕಾರದ ಈ ಜವಾಬ್ದಾರಿಯನ್ನು ಮತ್ತೆ ನೆನಪಿಸಿ ಒತ್ತಾಯ ಪೂರ್ವಕವಾಗಿ ಈ ಸೂಚನೆಗಳನ್ನು ನೀಡಬೇಕಾಗಿದೆ.

- ದೇಶವಾಸಿಗಳ ಆರೋಗ್ಯ ರಕ್ಷಣೆಯಲ್ಲಿ ಔಷಧಗಳ ಬೆಲೆ ನಿಯಂತ್ರಣ ಮಾಡಬೇಕಾದದ್ದು ಬಹಳ ಮುಖ್ಯ. ಭಾರತ ಸರಕಾರ ಮಾತ್ರವೇ ಇದನ್ನು ಮಾಡಲು ಸಾಧ್ಯ. ದೇಶದಲ್ಲಿ ಮೊಬೈಲುಗಳ ದರ, ಜೀವವಿಮೆಯ ಪ್ರೀಮಿಯಂ ದರ, ವಿದ್ಯುತ್ ದರ, ಬ್ಯಾಂಕಿನ ಬಡ್ಡಿದರ, ಇವೆಲ್ಲದಕ್ಕೂ ನಿರ್ಣಾಯಕ ಆಜ್ಞೆಗಳನ್ನು ಹೊರಡಿಸಿದಂತೆ ಔಷಧಗಳ ಬೆಲೆಯನ್ನೂ ಕೂಡ ಕೇಂದ್ರ ಸರಕಾರವು ತನ್ನ ನಿಯಂತ್ರಣದಲ್ಲಿಡಬೇಕು.
- ತನ್ನ ಕಂಪನಿಯ ಔಷಧಗಳನ್ನು ಬರೆದು ಕೊಟ್ಟರೆ ಡಾಕ್ಟರರಿಗೆ ವಿವಿಧ ಉಡುಗೊರೆಗಳು, ವಿದೇಶ ಪ್ರವಾಸ, ಮುಂತಾದ ಅನ್ಯಾಯದ ಆಮಿಷಗಳನ್ನೊಡ್ಡುವಂಥ ಔಷಧ ಮಾರಾಟ ತಂತ್ರಗಳನ್ನು ನಿಷೇಧಿಸಬೇಕು. ಜನರ ಆರೋಗ್ಯದ ಖರ್ಚು ಹೆಚ್ಚುವುದಕ್ಕೆ ಇವೇ ಮೂಲ ಕಾರಣಗಳಾಗಿವೆ.



ಔಷಧ ಮಾರುಕಟ್ಟೆಯ ಮೂಲ ಉದ್ದೇಶವನ್ನೇ ತಲೆ ಕೆಳಗೆ ಮಾಡುವಂಥ ಅಸಂಬದ್ಧ ಸಂಯುಕ್ತಗಳು, ಹಾನಿಕಾರಕ ಮತ್ತು ನಿಷೇಧ ಮಾಡಬೇಕಾದ ಔಷಧಗಳು ಇವನ್ನೆಲ್ಲ ಪೇಟೆಯಿಂದ ತೆಗೆದುಹಾಕಬೇಕು.

- ತಮಿಳುನಾಡು, ದೆಹಲಿ ರಾಜ್ಯಗಳಲ್ಲಿರುವಂತೆ ಔಷಧಗಳನ್ನು ಕೇಂದ್ರೀಕೃತವಾಗಿ ಸಗಟು ಖರೀದಿಸುವ ಪದ್ಧತಿ ಎಲ್ಲ ರಾಜ್ಯಗಳಲ್ಲೂ ಬರಬೇಕು.
- ವೈದ್ಯಕೀಯ ಪರೀಕ್ಷೆಗಳು, ಪ್ರಯೋಗಾಲಯಗಳಲ್ಲಿ ನಡೆಯುವ ಪರೀಕ್ಷೆಗಳು, ಆಪರೇಶನ್‌ಗಳು ಇವೆಲ್ಲಕ್ಕೂ ಕೊಡಬೇಕಾದ ಫೀಗಳ ಮೇಲೂ ಕಟ್ಟುನಿಟ್ಟಾದ ನಿಯಮ ನಿರ್ಬಂಧಗಳಿರಬೇಕು. ಒಂದು ಉದಾಹರಣೆ ಹೇಳಬೇಕೆಂದರೆ ಕಣ್ಣಿಗೆ ಮಸೂರ ಹಾಕಿ ಮಾಡುವ ಕೆಟರಾಕ್ಟ್ ಆಪರೇಶನ್ನಿಗೆ ಮಧುರೈನ ಅರವಿಂದ ಕಣ್ಣಿನ ಆಸ್ಪತ್ರೆಯಲ್ಲಿ ಕೇವಲ 600/- ರೂಪಾಯಿಗಳಾದರೆ, ಅದೇ ಆಪರೇಶನ್ನಿಗೆ ಬೇರೆ ಕಡೆಗಳಲ್ಲಿ 20,000 ರೂಪಾಯಿಗಳನ್ನು ವಿಧಿಸುತ್ತಾರೆ. ತನ್ನ ನೌಕರರಿಗೆ ಅಷ್ಟು ಹಣವನ್ನು ಮರುಭರ್ತಿ ಮಾಡುವಾಗ ಸರಕಾರವು ಪ್ರಶ್ನೆ ಮಾಡುವುದಿಲ್ಲವೇಕೆ?

ಇವೆಲ್ಲ ಬದಲಾವಣೆಗಳು ಟ್ರಿಪ್ಸ್ ಒಪ್ಪಂದಕ್ಕೆ ವಿರುದ್ಧವಾಗಿಯಂತೂ ಇಲ್ಲ.

ಔಷಧಗಳು ಜನರ ಕೈಗೆಟುಕುವಂತಿರಲಿ

- ಬೆಲೆ ನಿಯಂತ್ರಣ ಮಾಡುವಾಗ ಅದು ಯಾವ ಔಷಧ ಎನ್ನುವುದಕ್ಕಿಂತ ಯಾವ ಗುಂಪಿನಲ್ಲಿ ಬರುವ ಔಷಧವೆಂಬುದನ್ನು ಗಮನದಲ್ಲಿಟ್ಟುಕೊಳ್ಳಲಿ. ಎಲ್ಲಾ ಲಸಿಕೆಗಳೂ ಮತ್ತು ಡಿ.ಎನ್.ಎ. ತಂತ್ರಜ್ಞಾನ ಮೂಲದ ಎಲ್ಲ ಔಷಧಗಳೂ ಆಯಾ ಗುಂಪಿನಲ್ಲಿ ಸೇರಿಕೊಳ್ಳಲಿ.
- ಕೇಂದ್ರೀಕೃತ ಗುಣಮಟ್ಟದ ಔಷಧ ಖರೀದಿ ನೀತಿಯ ಮೂಲಕ ಉತ್ತಮ ಔಷಧಗಳು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಸಿಗುವಂತಾಗಲಿ.
- ಟ್ರಿಪ್ಸ್ ಕಾನೂನಿನಲ್ಲಿ ನೀಡಿರುವಂಥ ಎಲ್ಲ ಸವಲತ್ತುಗಳದ್ದೂ ಪೂರ್ಣ ಪ್ರಮಾಣದ ಬಳಕೆಯಾಗಲಿ.
- ಕ್ಷಯ, ಔಷಧ-ಪ್ರತಿರೋಧದ ಕ್ಷಯ, ಎಚ್.ಐ.ವಿ./ಏಡ್ಸ್, ಸಾಂಕ್ರಾಮಿಕವಲ್ಲದ ರೋಗಗಳ ಔಷಧಗಳು ಮತ್ತು ಜೀವಿರೋಧಕಗಳೆಲ್ಲವೂ ಸಾರ್ವಜನಿಕ ಉದ್ದಿಮೆಗಳಲ್ಲೇ ಸಿಗುವಂತಾಗಲಿ.
- ಅನವಶ್ಯಕ, ಅಸಂಬದ್ಧ, ಅಪಾಯಕಾರೀ ಔಷಧಗಳೆಲ್ಲವೂ ಮಾರುಕಟ್ಟೆಯಿಂದ ಸಂಪೂರ್ಣವಾಗಿ ತೊಲಗಲಿ.
- ಯಾವುದೇ ಹೊಸ ಔಷಧಕ್ಕೆ ಪರವಾನಿಗಿ ಕೊಡುವಾಗಲೂ ಅದರ ವೈದ್ಯಕೀಯ ಉಪಯೋಗ, ಸುರಕ್ಷಿತತೆ, ಮತ್ತು ಖರ್ಚು ಕಡಿತ ಈ ವಿಷಯಗಳ ಆಧಾರದ ಮೇಲೆಯೇ ಪರವಾನಿಗಿ ಕೊಡುವಂತಾಗಬೇಕು.
- ವೈದ್ಯಕೀಯ ಪರೀಕ್ಷೆಗಳು, ಪ್ರಯೋಗಗಳು, ಅಧ್ಯಯನಗಳೆಲ್ಲವೂ ನೈತಿಕ ನೆಲಗಟ್ಟಿನ ಮೇಲೆ ಆಗಬೇಕು. ಮತ್ತು ಇದಕ್ಕೆ ಸಂಬಂಧಿಸಿದಂತೆ ಒಂದು ರಾಷ್ಟ್ರೀಯ ನೀತಿ ಸಂಹಿತೆ ಇರಬೇಕು.
- ಔಷಧಗಳ ಬೆಲೆ, ಅನುಮತಿ ನೀಡಿಕೆ, ಮತ್ತು ಗುಣಮಟ್ಟ ಪರೀಕ್ಷೆ ಇವೆಲ್ಲವೂ ಒಂದೇ ಇಲಾಖೆಯಿಂದ ನಡೆಯಬೇಕು.
- 'ಬ್ರಿಟಿಷ್ ಫಾರ್ಮ್ಯುಲರಿ'ಯ ಮಾದರಿಯಲ್ಲಿ ಔಷಧಗಳ ಸರಿಯಾದ ಬಳಕೆಗೆ ಅವಶ್ಯವಾದ ರಾಷ್ಟ್ರೀಯ ಔಷಧ ಮಾಹಿತಿ ಪುಸ್ತಕವು ಪ್ರಕಟಗೊಳ್ಳುತ್ತಿರಬೇಕು.
- ಉತ್ಪಾದಕರ ನೀತಿ ಸಂಹಿತೆ ಜಾರಿಗೆ ತರುವುದರ ಮೂಲಕ ಅನ್ಯಾಯಪೂರಿತ ಮತ್ತು ಅನಪೇಕ್ಷಿತ ಔಷಧ ಪ್ರಚಾರ ತಂತ್ರಗಳನ್ನು ನಿಯಂತ್ರಿಸಬೇಕು.
- ಅವಶ್ಯಕ ಔಷಧಗಳ ರಾಷ್ಟ್ರೀಯ ಪಟ್ಟಿಯನ್ನು ಪ್ರತಿ 2-3 ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕು. ಹಾಗೆಯೇ ಬೆಲೆ ನಿಯಂತ್ರಣದಡಿಯಲ್ಲಿ ಬರುವ ಔಷಧಗಳ ಪಟ್ಟಿಯನ್ನೂ ಪರಿಷ್ಕರಿಸುತ್ತಿರಬೇಕು.

ಔಷಧಗಳು ಜನರ ಕೈಗೆಟುಕುವಂತಿರಲಿ

- ಬೆಲೆ ನಿಯಂತ್ರಣ ಮಾಡುವಾಗ ಅದು ಯಾವ ಔಷಧ ಎನ್ನುವುದಕ್ಕಿಂತ ಯಾವ ಗುಂಪಿನಲ್ಲಿ ಬರುವ ಔಷಧವೆಂಬುದನ್ನು ಗಮನದಲ್ಲಿಟ್ಟುಕೊಳ್ಳಲಿ. ಎಲ್ಲಾ ಲಸಿಕೆಗಳೂ ಮತ್ತು ಡಿ.ಎನ್.ಎ. ತಂತ್ರಜ್ಞಾನ ಮೂಲದ ಎಲ್ಲ ಔಷಧಗಳೂ ಆಯಾ ಗುಂಪಿನಲ್ಲಿ ಸೇರಿಕೊಳ್ಳಲಿ.
- ಕೇಂದ್ರೀಕೃತ ಗುಣಮಟ್ಟದ ಔಷಧ ಖರೀದಿ ನೀತಿಯ ಮೂಲಕ ಉತ್ತಮ ಔಷಧಗಳು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಸಿಗುವಂತಾಗಲಿ.
- ಟ್ರಿಪ್ಸ್ ಕಾನೂನಿನಲ್ಲಿ ನೀಡಿರುವಂಥ ಎಲ್ಲ ಸವಲತ್ತುಗಳದ್ದೂ ಪೂರ್ಣ ಪ್ರಮಾಣದ ಬಳಕೆಯಾಗಲಿ.
- ಕ್ಷಯ, ಔಷಧ-ಪ್ರತಿರೋಧದ ಕ್ಷಯ, ಎಚ್.ಐ.ವಿ./ಏಡ್ಸ್, ಸಾಂಕ್ರಾಮಿಕವಲ್ಲದ ರೋಗಗಳ ಔಷಧಗಳು ಮತ್ತು ಜೀವಿರೋಧಕಗಳೆಲ್ಲವೂ ಸಾರ್ವಜನಿಕ ಉದ್ದಿಮೆಗಳಲ್ಲೇ ಸಿಗುವಂತಾಗಲಿ.
- ಅನವಶ್ಯಕ, ಅಸಂಬದ್ಧ, ಅಪಾಯಕಾರೀ ಔಷಧಗಳೆಲ್ಲವೂ ಮಾರುಕಟ್ಟೆಯಿಂದ ಸಂಪೂರ್ಣವಾಗಿ ತೊಲಗಲಿ.
- ಯಾವುದೇ ಹೊಸ ಔಷಧಕ್ಕೆ ಪರವಾನಿಗಿ ಕೊಡುವಾಗಲೂ ಅದರ ವೈದ್ಯಕೀಯ ಉಪಯೋಗ, ಸುರಕ್ಷಿತತೆ, ಮತ್ತು ಖರ್ಚು ಕಡಿತ ಈ ವಿಷಯಗಳ ಆಧಾರದ ಮೇಲೆಯೇ ಪರವಾನಿಗಿ ಕೊಡುವಂತಾಗಬೇಕು.
- ವೈದ್ಯಕೀಯ ಪರೀಕ್ಷೆಗಳು, ಪ್ರಯೋಗಗಳು, ಅಧ್ಯಯನಗಳೆಲ್ಲವೂ ನೈತಿಕ ನೆಲಗಟ್ಟಿನ ಮೇಲೆ ಆಗಬೇಕು. ಮತ್ತು ಇದಕ್ಕೆ ಸಂಬಂಧಿಸಿದಂತೆ ಒಂದು ರಾಷ್ಟ್ರೀಯ ನೀತಿ ಸಂಹಿತೆ ಇರಬೇಕು.
- ಔಷಧಗಳ ಬೆಲೆ, ಅನುಮತಿ ನೀಡಿಕೆ, ಮತ್ತು ಗುಣಮಟ್ಟ ಪರೀಕ್ಷೆ ಇವೆಲ್ಲವೂ ಒಂದೇ ಇಲಾಖೆಯಿಂದ ನಡೆಯಬೇಕು.
- 'ಬ್ರಿಟಿಷ್ ಫಾರ್ಮ್ಯುಲರಿ'ಯ ಮಾದರಿಯಲ್ಲಿ ಔಷಧಗಳ ಸರಿಯಾದ ಬಳಕೆಗೆ ಅವಶ್ಯವಾದ ರಾಷ್ಟ್ರೀಯ ಔಷಧ ಮಾಹಿತಿ ಪುಸ್ತಕವು ಪ್ರಕಟಗೊಳ್ಳುತ್ತಿರಬೇಕು.
- ಉತ್ಪಾದಕರ ನೀತಿ ಸಂಹಿತೆ ಜಾರಿಗೆ ತರುವುದರ ಮೂಲಕ ಅನ್ಯಾಯಪೂರಿತ ಮತ್ತು ಅನಪೇಕ್ಷಿತ ಔಷಧ ಪ್ರಚಾರ ತಂತ್ರಗಳನ್ನು ನಿಯಂತ್ರಿಸಬೇಕು.
- ಅವಶ್ಯಕ ಔಷಧಗಳ ರಾಷ್ಟ್ರೀಯ ಪಟ್ಟಿಯನ್ನು ಪ್ರತಿ 2-3 ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕು. ಹಾಗೆಯೇ ಬೆಲೆ ನಿಯಂತ್ರಣದಡಿಯಲ್ಲಿ ಬರುವ ಔಷಧಗಳ ಪಟ್ಟಿಯನ್ನೂ ಪರಿಷ್ಕರಿಸುತ್ತಿರಬೇಕು.